ಮೈಸೂರ ಗೆಜೆಟ್ಟ.

ನಂ. 17 ಸರ್ಕಾರದಿಂದ ಫಾಯಿಸ್ ಆದ್ದು. ಸ್ಯ 1884.

ಬೆಂಗಳೂರು, ಶನಿವಾರ, ಏಪ್ರೆಲ್ ತಾ॥ 26, ಸ್ಯ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವ್ಹಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟೆಂಡೆಂಟರು, ಕಾಂ ಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬ್ಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಇನರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು; ಬೆಗ್ಗೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 26ನೇ ಮಾರ್ಚೀ 1884.

ನಂ. 342.—ಈ ವಿಷಯವಾಗಿ ಹಾಲಿ ಜಾರೀಲಿ ಇರತಕ್ಕ ಹುಕ್ಕುಂಗಳನ್ನು ರದ್ದುಪಡಿಸಿ, ದೀವಾ ಸಾಹೇಬರವರು ಹುಕ್ಕುಂ ಮಾಡುವದೇನಂದರೆ, ಬ್ರೀಜ್ ಆಫ್ ಕಂಟ್ರಾಕ್ಟು ಆಕ್ಟು ಅನುಸರಿಸಿ ಕೊಡಗು ದೇಶದಿಂದ ಕೊಡಲ್ಪಡುವ ಅವ್ವಲ್ ವಾರೆಂಟನ್ನು ಮೈಸೂರು ದೇಶದಲ್ಲಿ ಜಾರೀ ಮಾಡುವದಕ್ಕೋಸ್ಕರ 3 ರೂಪಾಯಿ ಫೀಜು ವಸೂಲ್ಮಾಡಲ್ಪಡತಕ್ಕದ್ದು.

ಅವ್ವಲ್ ವಾರೆಂಟುಗಳು ಜಾರೀ ಮಾಡಲ್ಪಡದ್ದೆ ಇದ್ದ ಸಂದರ್ಭಗಳಲ್ಲಿ ಎರಡನೇ ಮತ್ತು ತದನಂತರ ಕೊಡಲ್ಪಡುವ ವಾರೆಂಟುಗಳು ಯಾವ ಫೀಜು ಇಲ್ಲದೇನೆ ಜಾರೀ ಮಾಡಲ್ಪಡತಕ್ಕದ್ದು.

ತಾರೀಖು 21ನೇ ಏಪ್ರೆಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ. ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟ್ ವುತ್ಪತ್ತೀ ಬಾಬತು ಇದರಡಿ ಕಂಡ ನ್ಯಾ ಟೂಗಳು ಅಸಿಸ್ಟೆಂಟ್ ಕಮಿಸರವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಈ ಮೂ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.	ತೇಗದ ದಿಮ್ಮಿಗಳು.	ಕಾಡುಮರದ ದಿಮ್ಮಿಗಳು.	ತೇಗ ಮತ್ತು ಕಾಡುಮರದ ಕೊಂಬೆಗಳು.	ಜ್ಞಾಪ
ಸೊರಬ	(ಸೊರಬ ತಾಲ್ಲೂಕು) ..	10ನೇ ಮೇ 1884.	0	10	50	60
ಕೆರೆಹಳ್ಳಿ	ಡಿಟೋ ..	13 ಡಿಟೋ	15	50	200	265
ತೆಲಗದ್ದೆ	ಡಿಟೋ ..	15 ಡಿಟೋ	100	0	175	275
ತಿರಾಳಕೊಪ್ಪ	(ಶಿಕಾರಿಪುರ ತಾಲ್ಲೂಕು) ..	19 ಡಿಟೋ	10	200	200	410
ತುಂಬಿನಕಟ್ಟೆ	ಡಿಟೋ ..	21 ಡಿಟೋ	0	0	300	300
ಶಿಕಾರಿಪುರ	ಡಿಟೋ ..	23 ಡಿಟೋ	0	10	200	210
ಹೊಸೂರು	ಡಿಟೋ ..	26 ಡಿಟೋ	0	0	400	400
ಚಿಕ್ಕಹಲವನ್ನ	(ಹೊನ್ನಾಳಿ ತಾಲ್ಲೂಕು) ..	29 ಡಿಟೋ	0	19	22	41
ಚನ್ನಗಿರಿ	(ಚನ್ನಗಿರಿ ತಾಲ್ಲೂಕು) .	6ನೇ ಜೂ 1884.	50	0	400	450
ಕುಂಟಿನಮಡು	(ತರೀಕೆರೆ ತಾಲ್ಲೂಕು) ..	11 ಡಿಟೋ	0	0	100	100
ತರೀಕೆರೆ	ಡಿಟೋ ..	13 ಡಿಟೋ	50	50	100	200
ಲಕ್ಕವಳ್ಳಿ	ಡಿಟೋ ..	16 ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು) ..	20 ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು) ..	23 ಡಿಟೋ	50	150	100	300
ಶಿವಮೊಗಾ	ಡಿಟೋ ..	25 ಡಿಟೋ	150	350	600	1100

ಹರಾಜಿನ ಪರತ್ತುಗಳು.—ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂ 12ನೇ ಮತ್ತು 20ನೇ ನಂಬರ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 21ನೇ ಮಾರ್ಚ್ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಾ ಧ್ಯಾನ್ನಾತ್ಪರ 3 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ನಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೇಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.